**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ, ಗ್ರಾಮ ಪಂಚಾಯತಿ ಸದಸ್ಯರು, ಕಳಲುಘಟ್ಟ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(iii) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂ. ಗ್ರಾಅಪ 1135 ಗ್ರಾಪಂಅ 2018, ದಿನಾಂಕ 02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ: ಬೆಂಗ್ರಾಜಿಪಂ/ಗ್ರಾಪಂ/ಸಿಆರ್/32/2018-19, ದಿನಾಂಕ 05.07.2019.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂ. ಪ್ರಾಆಕ/ಅಭಿವೃದ್ಧಿ/ಸಿಆರ್/43/2019-20, ದಿನಾಂಕ 24.10.2019.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ, ಗ್ರಾಮ ಪಂಚಾಯತಿ ಸದಸ್ಯರು, ಕಳಲುಘಟ್ಟ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳು ಸತತವಾಗಿ ಕಳಲುಘಟ್ಟ ಗ್ರಾಮ ಪಂಚಾಯತಿಯ 4 ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸಂಬಂಧ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(iii) ರನ್ವಯ ಕ್ರಮ ಜರುಗಿಸುವ ಕುರಿತು ವರದಿಯನ್ನು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರ.ಸಂ.(3)ರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಸಂಗಡ ವಿಚಾರಣಾ ವರದಿಯಲ್ಲಿ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ, ಸದಸ್ಯರು, ಕಳಲುಘಟ್ಟ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಸತತವಾಗಿ 4 ಸಾಮಾನ್ಯ ಸಭೆಗಳಿಗೆ ಪಂಚಾಯತಿ ಸಭೆಗೆ ಗೈರು ಹಾಜರಾದ ಹಿನ್ನೆಲೆಯಲ್ಲಿ ಇವರುಗಳ ವಿರುದ್ಧ ಇರುವ ದೂರಿನ ಬಗ್ಗೆ ಸದರಿಯವರಿಗೆ ದಿನಾಂಕ: 24.07.2019 ರಂದು ಕಾರಣ ಕೇಳುವ ನೋಟೀಸ್ ನೀಡಿ ಲಿಖಿತ ವಿವರಣೆ ನೀಡುವಂತೆ ತಿಳಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ, ದಿನಾಂಕ: 21.10.2019 ರಂದು ಖುದ್ದು ಹಾಜರಾಗಿ ಲಿಖಿತ ಹೇಳಿಕೆ ನೀಡಿರುತ್ತಾರೆ. ದಿನಾಂಕ: 18.10.2019 ಹಾಗೂ 21.10.2019 ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಪ್ರತಿವಾದಿಗಳು ವಕೀಲರೊಂದಿಗೆ ಹಾಜರಾಗಿದ್ದು, ವಿಚಾರಣೆ ನಡೆಸಲಾಗಿರುತ್ತದೆ. ಸದರಿಯವರ ವಿರುದ್ಧ ಇರುವ ದೂರಿನ ಬಗ್ಗೆ ಅವರು ಕೊಟ್ಟ ಉತ್ತರವನ್ನು ಪರಿಶೀಲಿಸಲಾಯಿತು. ಸದರಿಯವರು ಸತತವಾಗಿ 4 ಬಾರಿ ಪಂಚಾಯತಿ ಸಭೆಗೆ ಗೈರು ಹಾಜರಾಗಿರುವುದು ಸತ್ಯವೆಂದು ಅವರೇ ಒಪ್ಪಿ ಅದಕ್ಕೆ ಕಾರಣಗಳನ್ನು ನೀಡಿರುತ್ತಾರೆ. ಶ್ರೀಮತಿ ಶಾಂತಮ್ಮ ರವರು ದಿನಾಂಕ: 15.10.2018 ರಲ್ಲಿ ಹಾಗೂ ಶ್ರೀ ಹನುಮಂತರಾಯಪ್ಪ ರವರು ದಿ: 08.05.2017 ರಲ್ಲಿ ಅನಾರೋಗ್ಯದ ಬಗ್ಗೆ ನೆಲಮಂಗಲದ ಸರ್ಕಾರಿ ಆಸ್ಪತ್ರೆಯಿಂದ ಮೆಡಿಕಲ್ ಸರ್ಟಿಫಿಕೇಟ್‌ನ್ನು ಪಡೆದು ದಿನಾಂಕ:18.10.2019 ರಲ್ಲಿ ಪ್ರಾದೇಶಿಕ ಆಯುಕ್ತರ ಕಚೇರಿಗೆ ಹಾಜರುಪಡಿಸಿರುತ್ತಾರೆ. ಶ್ರೀಮತಿ ಶಾಂತಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ, ಸದಸ್ಯರುಗಳು, ಕಳಲುಘಟ್ಟ ಗ್ರಾ.ಪಂ. ರವರು ವಿಚಾರಣಾ ಅವಧಿಯಲ್ಲಿ ನೀಡಿರುವ ಹೇಳಿಕೆ ಮತ್ತು ಲಿಖಿತ ಸಮಜಾಯಿಷಿ, ಮುಖ್ಯ ಕಾರ್ಯನಿವಾಹಕ ಅಧಿಕಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಾಡಿರುವ ವರದಿಯಿಂದ ಸದರಿಯವರು ಸತತವಾಗಿ 4 ಬಾರಿ ಪಂಚಾಯತಿ ಸಭೆಗೆ ಗೈರು ಹಾಜರಾಗಿರುವುದು ರುಜುವಾಗಿರುತ್ತದೆ. ಆದಕಾರಣ, ಶ್ರೀಮತಿ ಶಾಂತಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ,

ಸದಸ್ಯರುಗಳು, ಕಳಲುಘಟ್ಟ ಗ್ರಾ.ಪಂ. ರವರ ವಿರುದ್ಧ ಕರ್ನಾಟಕ ಗ್ರಾ.ಸ್ವ&ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(iii) ರನ್ವಯ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)(iii) ರಲ್ಲಿ ಸರ್ಕಾರವು, ಗ್ರಾಮ ಪಂಚಾಯತ್‌ನ ಶಿಫಾರಸ್ಸಿನಂತೆ ಅಥವಾ ಅನ್ಯಥ ಯಾವೊಬ್ಬ ಸದಸ್ಯನನ್ನು.-

> ಅವನು ಪಂಚಾಯತ್‌ನ ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಹಾಜರಾಗಲು ತಪ್ಪಿದ್ದರೆ, ಮತ್ತು ಅಧ್ಯಕ್ಷನಾಗಲಿ ಅಥವಾ ಉಪಾಧ್ಯಕ್ಷನಾಗಲಿ ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಾಗಿದ್ದಾಗ ಒಂದಾದ ಮೇಲೊಂದರಂತೆ ನಡೆಯಬೇಕಾದ ಎರಡು ಸಭೆಗಳನ್ನು ಕರೆಯಲು ತಪ್ಪಿದ್ದಾನೆಂದು; ಕಂಡುಬಂದರೆ, ಅವನಿಗೆ ಅಹವಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದುಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ, ಸದಸ್ಯರು, ಕಳಲುಘಟ್ಟ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಸತತವಾಗಿ ಕಳಲುಘಟ್ಟ ಗ್ರಾಮ ಪಂಚಾಯತಿಯ 4 ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(iii) ರನ್ವಯ ಇವರುಗಳನ್ನು ಕಳಲುಘಟ್ಟ ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/988/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:18.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(iii) ರನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ಕಳಲುಘಟ್ಟ ಗ್ರಾಮ ಪಂಚಾಯತಿಯ ಸದಸ್ಯರಾದ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ನರಸಮ್ಮ, ಶ್ರೀ ಹನುಮಂತರಾಯಪ್ಪ ಹಾಗೂ ಶ್ರೀಮತಿ ಶಾಂತಮ್ಮ ಇವರುಗಳನ್ನು ಕಳಲುಘಟ್ಟ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 18/01/2020
(ನವೀನ್‌ಕುಮಾರ್.ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ.) (ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಳಲುಘಟ್ಟ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5) ಸಂಬಂಧಿಸಿದವರಿಗೆ-ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನೆಲಮಂಗಲ ತಾಲ್ಲೂಕು ಇವರ ಮುಖಾಂತರ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
7) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.